

# ಅಲ್ಲಿ ಹೋಗಿ ತರುವೆನು ಮಲ್ಲಿಗೆ...

## ಮಲೆಯಾಳಂ ಭೂಮಿಕೆಯಲ್ಲಿ ಪವನ್ ಮೊಹರು

**ಸುಮಲತಾ ಎನ್.**

'ಲೈಫುಇಷ್ಟೇನೆ', 'ಲೂಸಿಯಾ', 'ಯು ಟರ್ನ್'ನಂಥ ಹೊಸ ಧಾಟಿಯ ಸಿನಿಮಾಗಳಿಂದ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಗುರುತು ಮೂಡಿಸಿದವರು ನಿರ್ದೇಶಕ ಪವನ್ ಕುಮಾರ್.

ಯೋಗರಾಜ ಭಟ್ಟರ ಗರಡಿಯಲ್ಲಿ ಪಳಗಿದ ಅವರು, 'ಲೂಸಿಯಾ'ದಂಥ ಸೈಕಲಾಜಿಕಲ್ ಥ್ರಿಲ್ಲರ್ ಸಿನಿಮಾ ಮೂಲಕ ತಮ್ಮ ವಿಶಿಷ್ಟ ಶೈಲಿಯನ್ನು ನಿರೂಪಿಸಿಕೊಂಡರು. ಸಂಭಾಷಣೆ, ನಟನೆ, ನಿರ್ದೇಶನದಲ್ಲಿ ಹೊಸ ಪ್ರಯೋಗಗಳಿಗೆ ಒಡ್ಡಿಕೊಂಡಿರುವ ಅವರು ಇದೀಗ ಮಲೆಯಾಳಂನ 'ಧೂಮಂ' ಸಿನಿಮಾ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾ ಕುರಿತು, ಸಿನಿಮಾ ನಿರ್ದೇಶನದ ಅನುಭವಗಳ ಕುರಿತು ಮಾತನಾಡಿದ್ದಾರೆ.

◆ **ನಿಮ್ಮ ಥ್ರಿಲ್ಲರ್ ಸಿನಿಮಾಗಳ ಪಟ್ಟಿಗೆ 'ಧೂಮಂ' ಹೊಸ ಸೇರ್ಪಡೆಯಾಗಲಿದೆಯೇ?**

ಹೌದು. ಇದು ಡ್ರಾಮಾ ಥ್ರಿಲ್ಲರ್ ಪ್ರಕಾರದ ಸಿನಿಮಾ. 'ಧೂಮಂ' ಸಿನಿಮಾವನ್ನು ಮಲೆಯಾಳಂ ಭಾಷೆಯಲ್ಲಿ ನಿರ್ದೇಶನ ಮಾಡಲಾಗಿದೆ. ಹೊಂಬಾಳೆ ನಿರ್ಮಾಣ ಸಂಸ್ಥೆಯಡಿ ಮೂಡಿಬರುತ್ತಿರುವ ಈ ಸಿನಿಮಾ ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲೂ ಬಿಡುಗಡೆಗೊಳ್ಳಲು ತಯಾರಿ ನಡೆದಿದೆ. ಮಲೆಯಾಳಂ ಖ್ಯಾತ ನಟ ಫಹಾದ್ ಫಾಸಿಲ್, ನಟಿ ಅಪರ್ಣಾ ಬಾಲಮುರಳಿ ಈ ಸಿನಿಮಾದಲ್ಲಿ ನಟಿಸಿದ್ದು, ಅಚ್ಯುತ್, ಕಿರಣ್, ಧರ್ಮಯ್ಯ ಸೇರಿದಂತೆ ಕನ್ನಡದ ಹಲವು ಕಲಾವಿದರು ಇದ್ದಾರೆ. ಸಿನಿಮಾ ಚಿತ್ರೀಕರಣ ಮುಗಿದಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಕೂಡ ಪೂರ್ಣಗೊಳ್ಳುತ್ತಿದ್ದು, ಇನ್ನು ಒಂದೂವರೆ ತಿಂಗಳಿನಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.

◆ **ಮೊದಲ ಬಾರಿ ಮಲೆಯಾಳಂ ಸಿನಿಮಾ ನಿರ್ದೇಶನ ಮಾಡಿದ್ದೀರಿ. ಮಲೆಯಾಳಂ ಸಿನಿಮಾರಂಗ ನಿಮಗೆ ಕೊಟ್ಟ ಅನುಭವಗಳು...**

'ಧೂಮಂ' ಮಲೆಯಾಳಂ ಭಾಷೆಯ ಸಿನಿಮಾ ಆದರೂ ಬೆಂಗಳೂರು, ಹೈದರಾಬಾದ್‌ನಲ್ಲಿಯೇ ಹೆಚ್ಚಾಗಿ ಶೂಟ್ ಮಾಡಿದೆವು. ಭಾಷೆ ಬೇರೆ ಅನ್ನುವುದು ಬಿಟ್ಟರೆ ಮಲೆಯಾಳಂ ಚಿತ್ರರಂಗ ಅಪರಿಚಿತ ಎಂಬ ಭಾವವೇನೂ ನನಗೆ ಬರಲಿಲ್ಲ. ಮಲೆಯಾಳಂನ ಕೆಲ ಸಹಾಯಕರು ನಮ್ಮೊಂದಿಗಿದ್ದರು. ಸೌಂಡ್ ಡಿಸೈನರ್, ಬರಹಗಾರರು, ಆರ್ಟ್ ಡೈರೆಕ್ಟರ್ ಮಲೆಯಾಳಂನವರಿದ್ದರು.

ಸಿನಿಮಾ ವಿಷಯದಲ್ಲಿ ಮಲೆಯಾಳಂನವರು ತುಂಬಾ ಪ್ಯಾಷನೇಟ್. ತುಂಬಾ ಶ್ರದ್ಧೆ, ಬದ್ಧತೆ ಇರುವವರು ಎನಿಸಿತು. ಉತ್ತಮ ಗುಣಮಟ್ಟದ ಸಿನಿಮಾ ನೀಡಬೇಕೆಂದು ಬಹಳ ಶ್ರಮವಹಿಸಿ ಕೆಲಸ ಮಾಡುತ್ತಾರೆ. ಅವರ ವೃತ್ತಿಪರತೆ ಮೆಚ್ಚಲೇಬೇಕು.

ಈ ಸಿನಿಮಾಗೆ ಕಲಾ ನಿರ್ದೇಶನ ಮಾಡಿದ ಅನೀಸ್ ನಾಡೋಡಿ ಇದಕ್ಕೊಂದು ಉತ್ತಮ ಉದಾಹರಣೆ. ನನ್ನ ಹನ್ನೆರಡು–ಹದಿನೈದು ವರ್ಷಗಳ ಸಿನಿಮಾ ಕರಿಯರ್‌ನಲ್ಲಿ ಇಷ್ಟು ಶ್ರದ್ಧೆಯಿಂದ ಕಲಾ ನಿರ್ದೇಶನ ಮಾಡಿದವರನ್ನು ನಾನು ಕಂಡಿದ್ದು ಇದೇ ಮೊದಲು. ನಮ್ಮ ಸಿನಿಮಾ ಕಟ್ಟುವ ಪ್ರಕ್ರಿಯೆಯನ್ನು ತುಂಬಾ ಸುಲಲಿತಗೊಳಿಸಿದರು.

ಮಲೆಯಾಳಂನವರು ಹೆಚ್ಚಾಗಿ ಮಾಸ್, ವ್ಯಾಪಾರ ಉದ್ದೇಶದಲ್ಲಿ ಯೋಚನೆ ಮಾಡದೇ ಕಲಾತ್ಮಕವಾಗಿ ಯೋಚಿಸುತ್ತಾರೆ. ಕಂಟೆಂಟ್ ಅಥವಾ ವಿಷಯಾಧಾರಿತ ಸಿನಿಮಾಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಸಾಕಷ್ಟು ಸಮಯ ಕೊಟ್ಟು ಒಳ್ಳೆಯ ಸಿನಿಮಾ ಕೊಡಲು ಬಯಸುತ್ತಾರೆ. ನಟನೆಯಲ್ಲೂ ಅಷ್ಟೆ. ಎಷ್ಟೇ ಬಾರಿ ರೀಟೇಕ್ ಆಗಲಿ, ನಿಧಾನವಾಗಲಿ, ಬೇಸರಿಸದೇ ಸಿನಿಮಾವನ್ನು ಅತ್ಯುತ್ತಮವಾಗಿ ನೀಡಲು ಪ್ರಯತ್ನಿಸುತ್ತಾರೆ.

◆ **ನಟ ಫಹಾದ್ ಫಾಸಿಲ್ ಅವರಿಗೆ ನಿರ್ದೇಶನ ಮಾಡಿದ್ದು ಹೇಗನಿಸಿತು?**

ಫಹಾದ್ ಫಾಸಿಲ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ನಟ. ಆದಾಗ್ಯೂ ಅವರು ಸೆಟ್‌ನಲ್ಲಿ ಹೊಸಬರಂತೆಯೇ ಇರುತ್ತಿದ್ದರು. ನಾನು ದೊಡ್ಡ ನಟ ಎಂಬ ಯಾವ ಹಮ್ಮು ಕೂಡ ಅವರಲ್ಲಿ ಕಾಣಲಿಲ್ಲ. 'ನಿರ್ದೇಶಕನೇ ಕ್ಯಾಪ್ಟನ್ ಆಫ್ ದಿ ಶಿಪ್' ಎಂಬ ವಾತಾವರಣವನ್ನು ಮೊದಲ ದಿನವೇ ತಂದರು. ಈ ದೃಶ್ಯ ಚೆನ್ನಾಗಿಲ್ಲ, ಇನ್ನೊಂದು ಸಾರಿ ಮಾಡೋಣ ಎಂದರೆ ಯಾವುದೇ ಬೇಸರ ತೋರದೆ ನಮ್ಮ ದಾರಿಯನ್ನು ಇನ್ನಷ್ಟು ಸರಳ ಮಾಡಿಕೊಡುತ್ತಿದ್ದರು. ಒಮ್ಮೊಮ್ಮೆ ಅವರೇ ಬಂದು, 'ಇಲ್ಲ ನಾನು ಇನ್ನೊಮ್ಮೆ ಮಾಡುತ್ತೇನೆ. ಇನ್ನೂ ಬೆಟರ್ ಆಗಿ ಮಾಡುತ್ತೇನೆ' ಎನ್ನುತ್ತಿದ್ದರು.

